44ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ16164/15 ಚಾ.ಸಾ. 1

ಪ್ರಾ.ಸಾ. 1

| | |
|---|---|
| ಸಾಕ್ಷಿಯ ಹೆಸರು | ಸುಧಾ ರವಿ |
| ಗಂಡನ ಹೆಸರು | ರವಿ |
| ವಯಸ್ಸು | 46 ವರ್ಷ |
| ಉದ್ಯೋಗ | ಗೃಹಿಣಿ |
| ವಿಳಾಸ | ಜೆ ಪಿ ನಗರ, ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ 03-02-2016 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆ ಃ ಸ.ಸ.ಅ.

ಈ ದಿನ ದೃಶ್ಯಾವಳಿಯ ಮೂಲಕ ಹಾಜರುಪಡಿಸಿರುವ 1 ಮತ್ತು 2 ಆರೋಪಿಗಳನ್ನು ನಾನು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿಃ18-12-2014 ರಂದು ಮದ್ಯಾಹ್ನ 12-45 ಗಂಟೆಯ ಸಮಯದಲ್ಲಿ ರಾಗಿಗುಡ್ಡ ದೇವಸ್ಥಾನದಿಂದ ಪಕ್ಕದ ರಸ್ತೆಯಲ್ಲಿರುವ ನಮ್ಮ ಮನೆಗೆ ನಡೆದುಕೊಂಡು ಹೋಗುತ್ತಿರುವಾಗ 1ನೇ ಆರೋಪಿಯು ಹಿಂದಿನಿಂದ ನಡೆದುಕೊಂಡು ಬಂದು ನನ್ನ ಕತ್ತಿನಲ್ಲಿದ್ದ 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು

ಓಡಿ ಹೋಗಿ ರಸ್ತೆಯ ಕೊನೆಯಲ್ಲಿ ದ್ವಿಚಕ್ರ ವಾಹನದಲ್ಲಿ ಕಾಯುತ್ತಾ ನಿಂತಿದ್ದ 2ನೇ ಆರೋಪಿಯೊಂದಿಗೆ ಬೈಕಿನಲ್ಲಿ ಪರಾರಿಯಾದರು. ಈ ವಿಚಾರವಾಗಿ ನಾನು ಪೋಲಿಸರಿಗೆ ದೂರು ನೀಡಿದ್ದೇನೆ. ನಂತರ ಪೋಲಿಸಿನವರು ನಮ್ಮ ಮನೆಗೆ ಬಂದು ನನ್ನ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ, ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಇದಾದ 1 ವರ್ಷದ ನಂತರ ಜೆ ಪಿ ನಗರ ಪೋಲಿಸಿನವರು ನನ್ನನ್ನು ಪೋನ್ ಮುಖಾಂತರ ಠಾಣೆಗೆ ಕರೆಯಿಸಿ ಕಳ್ಳತನವಾಗಿದ್ದ ನನ್ನ ಸರವನ್ನು ತೋರಿಸಿದರು ಮತ್ತು ಆರೋಪಿಗಳನ್ನು ನನ್ನ ಸರ ಕದ್ದಿರುವವರೆಂದು ತೋರಿಸಿರುತ್ತಾರೆ. ಈ ವಿಚಾರವಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನಂತರ ನ್ಯಾಯಾಲಯದ ಮೂಲಕ ನನ್ನ ಸರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ದೂರನ್ನು ಮತ್ತು ಮಹಜರ್‌ನ್ನು ನಿಪಿ-1 ಮತ್ತು 2 ಎಂದು, ಅವುಗಳಲ್ಲಿರುವ ತಮ್ಮ ಸಹಿಗಳನ್ನು ನಿಪಿ-1 (ಎ) ಮತ್ತು 2 (ಎ) ಎಂದು ಗುರುತಿಸಿರುತ್ತಾರೆ. ನನಗೆ ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ಗೊತ್ತಿರುತ್ತವೆ. ಸಾಕ್ಷಿ ತಮ್ಮ ಸರದ ಪೋಟೋ ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ-3 ಎಂದು ಗುರುತಿಸಲಾಗಿದೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಾದ್ದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿದೆ)**

ಓ ಹೇ ಕೇ ಸ ಇ

44ನೇ ಅ.ಮು.ಮ.ದಂ. ಬೆಂಗಳೂರು.